ವೈಂಡ್ ಮಾಡುತ್ತಾ ಕೂತಿರುವುದು ಶಾಂತಾ ಅವರಿಗೆ ನೋವಿನ ವಿಷಯವಾಗಿತ್ತು.

ಇನ್‌ಸ್ಟಿಟ್ಯೂಟಿನಲ್ಲಿ ಇದ್ದ ಈ ಸಮಯದಲ್ಲಿ 'ಹ್ಯಾಮಿಂಗ್' ಕೂಡಾ ಶಾಂತಾ ಅವರ ಆಸಕ್ತಿಯ ವಿಷಯವಾಯಿತು. ಪರೀಕ್ಷೆಯೊಂದನ್ನು ಪಾಸು ಮಾಡಿ, ಹ್ಯಾಮ್ ಆಪರೇಟ್ ಮಾಡಲು ಬೇಕಾದ ತಮ್ಮದೇ 'ಕಾಲ್ ಸೈನ್' ಪಡೆದ ಕರ್ನಾಟಕದ ಪ್ರಥಮ ಮಹಿಳೆ ಶಾಂತಾ ಆಗಿದ್ದರು.

## ಭಾರತ್ ಎಲೆಕ್ಟ್ರಾನಿಕ್ಸ್ ಕಂಪನಿಗೆ

ಶಾಂತಾ ಕೊನೆಯ ವರ್ಷದಲ್ಲಿ ಇದ್ದಂತೆಯೇ, 'ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್' (ಬಿ.ಇ.ಎಲ್.) ಕಂಪನಿಯಲ್ಲಿ ಕೆಲಸ ದೊರೆಯಿತು. ಡಿಸೆಂಬರ್ 1963ರಲ್ಲಿ ಬಿ.ಇ.ಎಲ್. ಕಂಪನಿಯ ಸಂಶೋಧನಾ ವಿಭಾಗದಲ್ಲಿ ಅಸಿಸ್ಟೆಂಟ್ ಎಂಜಿನಿಯರ್ ಆಗಿ ಸೇರಿದರು. 'ಆರ್ ಅಂಡ್ ಡಿ' ವಿಭಾಗದಲ್ಲಿ ಇದ್ದ ಸುಮಾರು 60 ಪುರುಷರ ನಡುವೆ ಇವರೊಬ್ಬರೇ ಮಹಿಳಾ ಎಂಜಿನಿಯರ್! ಬಿ.ಇ.ಎಲ್. ಬಹುತೇಕ ರಕ್ಷಣಾದಳದ ಯೋಜನೆಗಳಲ್ಲಿ ತೊಡಗಿತ್ತು. ಶಾಂತಾ ಡಿಫೆನ್ಸ್‌ಗೆ ಸಂಬಂಧಿಸಿದ 'ಆಸಿಲೇಟರ್' ಮತ್ತು 'ಬ್ರಾಡ್ ಬ್ಯಾಂಡ್ ಆಂಪ್ಲಿಫೈಯರ್' ಮೇಲೆ ಕೆಲಸ ಮಾಡಿದರು.

1965ರಲ್ಲಿ ಇನ್‌ಸ್ಟಿಟ್ಯೂಟ್‌ನಲ್ಲಿ ಸಹಪಾಠಿಯಾಗಿದ್ದ ವಿಜಯರಾಘವನ್, ಅಮೆರಿಕಗೆ ಹೋಗಿ ಪರ್ಡ್ಯೂ ವಿಶ್ವವಿದ್ಯಾಲಯದಲ್ಲಿ ಎಂ.ಎಸ್. ಪದವಿಯನ್ನು ಪಡೆದು, ಇದೀಗ ಬಿ.ಇ.ಎಲ್.ನ 'ಸ್ಪೆಷಲ್ ಪ್ರಾಜೆಕ್ಟ್ಸ್ ಟೀಮ್'ನಲ್ಲಿ ಪೂಲ್ ಆಫೀಸರ್ ಆಗಿ ಬಂದು ಸೇರಿಕೊಂಡರು. 'ಪೂಲ್ ಆಫೀಸರ್' ಎನ್ನುವುದು ಅಮೆರಿಕದಿಂದ ಹಿಂತಿರುಗಿದ ಎಂಜಿನಿಯರುಗಳಿಗೆ, ಅವರು ಮತ್ತಾವುದಾದರೂ ಕೆಲಸ ಹುಡುಕಿಕೊಳ್ಳುವವರೆಗೆ ನೀಡುತ್ತಿದ್ದ 600 ರೂಪಾಯಿಯ ನಿಗದಿತ ಸಂಬಳದ ಕೆಲಸ.

ಇನ್‌ಸ್ಟಿಟ್ಯೂಟಿನ ದಿನಗಳಲ್ಲಿ ಸದಾ ನಗೆಚಟಾಕಿ ಹಾರಿಸುವ ಸಂತಸದ ಬುಗ್ಗೆಯಾಗಿದ್ದ ವಿಜಯರಾಘವನ್ ಅವರನ್ನು ಬಹುಶಃ ಶಾಂತಾ ಮರೆತಿರಲಿಲ್ಲ. ಮೊದಲೇ ಸಹಪಾಠಿಗಳಾಗಿ ಪರಿಚಿತರಿದ್ದ ಶಾಂತಾ ಮತ್ತು ವಿಜಯರಾಘವನ್ ಇದೀಗ ಬಿ.ಇ.ಎಲ್. ಕಾರ್ಖಾನೆಯಲ್ಲಿ ಪುನರ್‌ಭೇಟಿಯಾಗಿ, ಸ್ನೇಹಿತರಾದರು. ಬಸವನಗುಡಿಯಲ್ಲಿ ವಿಜಯರಾಘವನ್ ಇದ್ದ ಕಾರಣ, ಅನೇಕ ಬಾರಿ ಶಾಂತಾ ಅವರನ್ನು ತಮ್ಮ ಕಾರಿನಲ್ಲಿ ಕಾರ್ಖಾನೆಗೆ ಕರೆತರುತ್ತಿದ್ದರು. ಆ ಕಾಲದಲ್ಲಿ ಶಾಂತಾ ಅನೇಕ ಬಾರಿ ಸಿಟಿ ಮಾರ್ಕೆಟ್‌ನ ಜಂಕ್ ಶಾಪ್‌ಗಳಿಗೆ ಹ್ಯಾಮ್ ಕೆಲಸಕ್ಕೆ ಬೇಕಾದ 'ಟ್ರಾನ್ಸೀವರ್'ನ ಬಿಡಿಭಾಗಗಳನ್ನು ತರಲು ಹೋಗುತ್ತಿದ್ದರು.

ವಿಜಯರಾಘವನ್ ತಮ್ಮ ಮನದ ಇಚ್ಛೆಯನ್ನು ಶಾಂತಾ ಅವರ ಮುಂದಿಡಲು ಹೆಚ್ಚು ದಿನ ಹಿಡಿಸಲಿಲ್ಲ. ಶಾಂತಾ ಅವರಿಗೆ ಈಗಲೂ ನೆನಪಿದೆ – 1966ರ ಜನವರಿ 26, ವಿಜಯರಾಘವನ್ ಶಾಂತಾ ಅವರ ಮನೆಗೆ ಬಂದು, ಕೆಲವು ಸ್ಪೀಕರ್ಸ್ ತರಲು ಸಿಟಿ ಮಾರ್ಕೆಟ್‌ಗೆ ತಮ್ಮೊಡನೆ ಬರುವಂತೆ



ಅಪೂರ್ವ ಜೋಡಿ: ಶಾಂತಾ – ವಿಜಯರಾಘವನ್

ಅವರನ್ನು ಕೇಳಿಕೊಂಡರು. ಶಾಂತಾ ಅವರಿಗೆ ಆ ಅಂಗಡಿಗಳೆಲ್ಲ ಗೊತ್ತಿದ್ದ ಕಾರಣ, ಒಪ್ಪಿ ಅವರೊಂದಿಗೆ ಹೊರಟರು. ಟೌನ್ ಹಾಲ್ ಬಳಿ ಬರುತ್ತಿದ್ದಂತೆ ವಿಜಯರಾಘವನ್, ಅವರನ್ನು ಇಲ್ಲಿಗೆ ಕರೆತಂದ ದಿಟವಾದ ಉದ್ದೇಶ 'ತಮ್ಮನ್ನು ಮದುವೆಯಾಗಲು ಕೇಳಿಕೊಳ್ಳುವುದಾಗಿತ್ತು' ಎಂದು ಹೇಳಿದ್ದರು!

## ದುಡಿವ ಮಹಿಳೆಯ ಸಾಹಸ

ಮೇ 22, 1966, ಶಾಂತಾ ಮತ್ತು ವಿಜಯರಾಘವನ್ ವಿವಾಹವಾದರು. ಐದು ಮಕ್ಕಳ ಮನೆಯಲ್ಲಿ ವಿಜಯರಾಘವನ್ ಎಲ್ಲರಿಗಿಂತ ಕಿರಿಯವರಿದ್ದರು. ಮದುವೆಯಾದ ಮೇಲೆ ಸೊಸೆ ಕೆಲಸ ಬಿಡಬೇಕು ಎಂದು ಮಾವನವರು ಬಯಸಿದ್ದರು. ಆದರೆ ಶಾಂತಾ ತಮ್ಮ ಕೆಲಸ ಬಿಡದೆ, ಮುಂದುವರೆಸಿದರು.

ಅದೇ ವರ್ಷ ಶಾಂತಾ ಗರ್ಭಿಣಿಯಾದರು. ಮಾರ್ಚ್ 1967 ಮೊದಲ ಮಗ ಭರತ್ ಹುಟ್ಟಿದ್ದ. ಮಾವನವರಿಗೆ ಮಗು ಹುಟ್ಟಿದ ಮೇಲೂ ಸೊಸೆ ಕೆಲಸ ಮಾಡುವುದು ಕೊಂಚವೂ ಇಷ್ಟವಿರಲಿಲ್ಲ. ಆದರೆ ಶಾಂತಾ ತಮ್ಮ ಕೆಲಸ ಬಿಡಲಿಲ್ಲ. ಮಗನನ್ನು ನೋಡಿಕೊಳ್ಳಲು ಅತ್ತೆಯ ಸಹಾಯ ಪಡೆದರು. ಅತ್ತೆಗೆ ಸಹಾಯಕಳಾಗಿ ಮಗುವಿನ ಕೆಲಸಕ್ಕೆ ಓರ್ವ ಹುಡುಗಿಯನ್ನು ನೇಮಿಸಿಕೊಂಡರು.

ಕಾರ್ಖಾನೆಯ ಕೆಲಸ ಸುಲಭವಿರಲಿಲ್ಲ. ಮೊದಲ ಶಿಫ್ಟ್ 7 ಗಂಟೆಗೇ ಶುರುವಾಗುತ್ತಿತ್ತು. ಬೆಳಗ್ಗೆ 5.30ಕ್ಕೆ ಹೊತ್ತಲ್ಲದ ಹೊತ್ತಿನಲ್ಲಿ ಮನೆಯಿಂದ ಹೊರಬಿದ್ದು ಕಾರ್ಖಾನೆಯ ಬಸ್ಸು ಹಿಡಿದು, ನಗರದ ಮತ್ತೊಂದು ಮೂಲೆಯಲ್ಲಿದ್ದ ಬಿ.ಇ.ಎಲ್.ಗೆ ಬರಬೇಕಿತ್ತು. ಆದರೆ ಕಾರ್ಖಾನೆ ಮಧ್ಯಾಹ್ನ ಮೂರು ಗಂಟೆಗೆ ಮುಗಿದಾಗ, ನಾಲ್ಕು ಗಂಟೆಯ ಒಳಗೇ ಮನೆ ತಲುಪಿ ಬಿಡುತ್ತಿದ್ದರು. ಇವರಿಗೆ ಕಾದಿದ್ದ ಅತ್ತೆ, ಶಾಂತಾ ಮನೆಗೆ ಬಂದೊಡನೆ ಬಸವನಗುಡಿಯ 'ಲೇಡೀಸ್ ಕ್ಲಬ್'ಗೆ ಹೋಗುತ್ತಿದ್ದರು. ಸೊಸೆ ಮನೆಯಲ್ಲಿರಬೇಕು ಎಂದು ಬಯಸುತ್ತಿದ್ದ ಆ ಕಾಲದಲ್ಲಿ, ದುಡಿಯಲು ಹೊರಟ ತಮಗೆ ಅತ್ತೆ ನೀಡಿದ ಬೆಂಬಲ ಮತ್ತು ಅವರೊಡನೆಯ ತಮ್ಮ ಸೌಹಾರ್ದದ ಸಂಬಂಧವನ್ನು ಇಂದಿಗೂ ಶಾಂತಾ ನೆನೆಯುತ್ತಾರೆ.

ಭರತ್ ಹೆಚ್ಚು ತೊಂದರೆ ಕೊಡದ ಮಗು. ಮಗುವನ್ನು ದೊಡ್ಡ ಬಿದಿರಿನ ತೊಟ್ಟಿಲಲ್ಲಿ ಮಲಗಿಸುವರು. ಮಧ್ಯರಾತ್ರಿ ಎದ್ದು ಅತ್ತರೆ, ವಿಜಯರಾಘವನ್ ತೊಟ್ಟಿಲು ತೂಗಬೇಕಿತ್ತು, ಅವರಲ್ಲದೆ ಬೇರೆ ಯಾರೇ ತೂಗಲಿ ಮಗು ಮಲಗುತ್ತಿರಲಿಲ್ಲ!

## 'ಆರ್ ಅಂಡ್ ಡಿ'ಯಲ್ಲಿ ಮಹಿಳೆಯರು ಬೇಡ!

ಇಸವಿ 1968ರಲ್ಲಿ ವಿಜಯರಾಘವನ್ ಬಿ.ಇ.ಎಲ್. ಕಂಪನಿಯನ್ನು ಬಿಟ್ಟು, ಐ.ಟಿ.ಐ. ಕಂಪನಿಯನ್ನು ಸೇರಿದರು. ಅದೇ ವರ್ಷ ಬಿ.ಇ.ಎಲ್.ನಲ್ಲಿ ಮಹತ್ತರದ ಬದಲಾವಣೆಗಳು ಆದವು. ಶಾಂತಾ ಅವರ ಮೇಲಧಿಕಾರಿಗಳಾಗಿ ಬಂದ ಕರ್ನಲ್ ಜಿ.ಕೆ. ರಾವ್ 'ಆರ್ ಅಂಡ್ ಡಿ ವಿಭಾಗದಲ್ಲಿ ಹೆಂಗಸರು ಬೇಡ' ಎಂದು ಹೇಳಿದಾಗ, ಸಂಶೋಧನೆ ಮತ್ತು ವಿನ್ಯಾಸದಲ್ಲಿ ಅತ್ಯಂತ ಆಸಕ್ತಿಯಿಂದ ತೊಡಗಿದ್ದ ಶಾಂತಾ ಅವರಿಗೆ ದಿಗ್ಭ್ರಮೆ. ಅಷ್ಟು ಸಾಲದೆಂದು, ಶಾಂತಾ ಅವರನ್ನು 'ತಾಂತ್ರಿಕ ಸಹಾಯಕಿ' ಸ್ಥಾನಕ್ಕೆ ರಾವ್ ಇಳಿಸಿದ್ದರು. ಅರ್ಧ ಶತಮಾನದಾಚೆಗೆ ನನ್ನೊಡನೆ ಈ ಘಟನೆಯನ್ನು ಹಂಚಿಕೊಂಡಾಗ ಶಾಂತಾ, 'ನನ್ನನ್ನು ಪಿ.ಎ. ಕೆಲಸಕ್ಕೆ ಹಚ್ಚಿದ್ದರು' ಎಂದು ಧುಮ್ಮಿಕ್ಕಿದ ಅಸಮಾಧಾನದಲ್ಲಿ ಹೇಳಿದರು.

ಲಿಂಗ ತಾರತಮ್ಯಕ್ಕೆ ಗುರಿಯಾಗಿ ಸಮಾನ ಅವಕಾಶಗಳಿಂದ ವಂಚಿತರಾದ ಮಹಿಳೆಯರ